## ನಿಮ್ಮೊಡನೆ

# ಹೊಸ ಕನಸುಗಳ ‘ಮಹಿಳಾ ಪ್ರಾತಿನಿಧ್ಯ’

ಇದುವರೆಗಿನ ಚುನಾವಣೆಗಳಲ್ಲಿ, ಮಹಿಳಾ ಮೀಸಲಾತಿ ದುರುಪಯೋಗವಾದ ಉದಾಹರಣೆಗಳನ್ನು ಹೆಚ್ಚು ನೋಡಿದ್ದೇವೆ. ಹಾಲಿ ಪುರುಷ ಸದಸ್ಯರು ಹಾಗೂ ಆಕಾಂಕ್ಷಿ ಪುರುಷರು ತಮ್ಮ ಹೆಂಡತಿಯರನ್ನೋ ಸಹೋದರಿಯರನ್ನೋ ಚುನಾವಣೆಯಲ್ಲಿ ನಿಲ್ಲಿಸಿ ಗೆಲ್ಲಿಸುವುದು ಹಾಗೂ ಅವರ ಹೆಸರಿನಲ್ಲಿ ತಾವೇ ಅಧಿಕಾರ ಚಲಾಯಿಸುವುದು ಭಾರತೀಯ ರಾಜಕಾರಣದಲ್ಲಿ ಚಾಲ್ತಿಯಲ್ಲಿರುವ ರೂಢಿ.


ಈಶ್ವರ್

ಆಡಳಿತದಲ್ಲಿ ಮಹಿಳೆಯರಿಗೆ ಸಮಾನ ಅವಕಾಶಗಳನ್ನು ಕಲ್ಪಿಸುವ ಪ್ರಜಾಪ್ರಭುತ್ವದ ಆಶಯದ ಈಡೇರಿಕೆಗೆ ಬರುವ ಜುಲೈ 28ರಂದು ನಡೆಯುವ ಬೆಂಗಳೂರು ಮಹಾನಗರ ಪಾಲಿಕೆಯ ಚುನಾವಣೆ ಮತ್ತೊಂದು ಒರೆಗಲ್ಲಾಗಲಿದೆ. ಈ ಚುನಾವಣೆ ರೂಪಿಸಲಿರುವ ಪಾಲಿಕೆಯಲ್ಲಿ ಸುಮಾರು ಅರ್ಧದಷ್ಟು ಮಹಿಳಾ ಸದಸ್ಯರು ಇರುವುದು ಪ್ರಜಾಸತ್ತೆಯ ಘನತೆಯನ್ನು ಎತ್ತಿಹಿಡಿಯುವಂತಿದೆ. ಹಾಗೆ ನೋಡಿದರೆ, ಪ್ರಜಾಪ್ರಭುತ್ವದ ಆಶಯಗಳ ಹೊರತಾಗಿಯೂ ಪಾಲಿಕೆಗೆ ಇಂಥದೊಂದು ‘ಸ್ತ್ರೀ ಸ್ಪರ್ಶ’ ಅದರ ಉಳಿವಿನ ದೃಷ್ಟಿಯಿಂದ ಮಹತ್ವದ್ದು. ಹಲವು ವಿವಾದಗಳು, ಗೊಂದಲಗಳು ಹಾಗೂ ಭ್ರಷ್ಟಾಚಾರದ ಆಗರವಾಗಿರುವ ಪಾಲಿಕೆ ಮತ್ತೆ ಹೊಸ ಹುಟ್ಟು ಪಡೆಯಲಿಕ್ಕೆ ಈ ಮಹಿಳಾ ಪ್ರಾತಿನಿಧ್ಯ ಕಾರಣವಾಗುವ ಸಣ್ಣದೊಂದು ನಿರೀಕ್ಷೆಯಿದೆ. ಜಡ್ಡುಗಟ್ಟಿರುವ ಪಾಲಿಕೆಯ ಆಡಳಿತದಲ್ಲಿ ಹೊಸ ಕನಸುಗಳನ್ನು ಬಿತ್ತುವ ಕೆಲಸವನ್ನು ಹೊಸ ಮುಖಗಳು ಮಾಡಲಿಕ್ಕೆ ಒಂದು ಅವಕಾಶವನ್ನು ಪ್ರಜಾಪ್ರಭುತ್ವ ಒದಗಿಸಿಕೊಟ್ಟಿದೆ.

ಮಹಿಳೆಯರ ಸಾಮರ್ಥ್ಯದ ಬಗ್ಗೆ ಪುರುಷ ಪ್ರಧಾನ ಸಮಾಜದ ಅಪನಂಬಿಕೆ ಹಾಗೂ ಪೂರ್ವಗ್ರಹಗಳು ಮನುಕುಲದ ಇತಿಹಾಸದಷ್ಟೇ ಪುರಾತನವಾದವು. ಆದರೆ, ಅವಕಾಶ–ಅಧಿಕಾರ ದೊರೆತಾಗಲೆಲ್ಲ ಮಹಿಳೆ ತನ್ನ ಸಾಮರ್ಥ್ಯವನ್ನು ಸಂದೇಹಕ್ಕೆ ಆಸ್ಪದವಿಲ್ಲದಂತೆ ನಿರೂಪಿಸಿದ್ದಾಳೆ. ಪುರುಷರ ಪಾಲಿಗೆ ಅಧಿಕಾರ ಎನ್ನುವುದು ಅವರ ಅಹಂಕಾರ ಪೋಷಣೆಗೆ ದೊರೆಯುವ ಅಲಂಕಾರಿಕ ಸಾಧನ ಹಾಗೂ ಸವಲತ್ತು. ಆದರೆ, ಮಹಿಳೆಯರ ಪಾಲಿಗೆ ಅದೊಂದು ಅವಕಾಶ ಹಾಗೂ ಜವಾಬ್ದಾರಿ. ಕುಟುಂಬ ನಿರ್ವಹಣೆಯಲ್ಲಿ ಮಹಿಳೆಯರು ತೋರುವ ಅಸಾಧಾರಣ ಧಾರಣಾಶಕ್ತಿಯನ್ನು ಕೂಡ ಇಲ್ಲಿ ನೆನಪಿಸಿಕೊಳ್ಳಬೇಕು. ಈಗಾಗಲೇ ತನಗೆ ಅವಕಾಶ ದೊರೆತಿರುವ ಕ್ಷೇತ್ರಗಳಲ್ಲೆಲ್ಲ ಮಹಿಳೆ ದಕ್ಷತೆ ಹಾಗೂ ಪ್ರಾಮಾಣಿಕತೆಯಿಂದ ಕೆಲಸ ಮಾಡಿರುವ ಉದಾಹರಣೆಗಳಿವೆ. ರಾಜಕಾರಣದಲ್ಲಿ ಕೂಡ ಮಹಿಳೆಯರು ತಮ್ಮದೇ ಆದ ವರ್ಚಸ್ಸನ್ನು ರೂಪಿಸಿಕೊಳ್ಳುತ್ತಿರುವ ವರ್ತಮಾನ ಇಂದಿನದು. ಈ ಹಿನ್ನೆಲೆಯಲ್ಲಿ ಬಿಬಿಎಂಪಿಗೆ ‘ಸ್ತ್ರೀ ಸ್ಪರ್ಶ’ದ ಮೂಲಕ ಕಾಯಕಲ್ಪ ಕೊಡುವ ದೃಷ್ಟಿಯಿಂದ ಕೂಡ ಪ್ರಸಕ್ತ ಚುನಾವಣೆಗೆ ಮಹತ್ವವಿದೆ.

ಈ ಚುನಾವಣೆಯಲ್ಲಿ ಮತದಾರರ ಪಾತ್ರ ಬಹು ಮುಖ್ಯವಾದುದು. ಇದುವರೆಗಿನ ಚುನಾವಣೆಗಳಲ್ಲಿ, ಮಹಿಳಾ ಮೀಸಲಾತಿ ದುರುಪಯೋಗವಾದ ಉದಾಹರಣೆಗಳನ್ನು ಹೆಚ್ಚು ನೋಡಿದ್ದೇವೆ. ಹಾಲಿ ಪುರುಷ ಸದಸ್ಯರು ಹಾಗೂ ಆಕಾಂಕ್ಷಿ ಪುರುಷರು ತಮ್ಮ ಹೆಂಡತಿಯರನ್ನೋ ಸಹೋದರಿಯರನ್ನೋ ಚುನಾವಣೆಯಲ್ಲಿ ನಿಲ್ಲಿಸಿ ಗೆಲ್ಲಿಸುವುದು ಹಾಗೂ ಅವರ ಹೆಸರಿನಲ್ಲಿ ತಾವೇ ಅಧಿಕಾರ ಚಲಾಯಿಸುವುದು ಭಾರತೀಯ ರಾಜಕಾರಣದಲ್ಲಿ ಚಾಲ್ತಿಯಲ್ಲಿರುವ ರೂಢಿ. ಕುಟುಂಬಗಳ ಆಸ್ತಿಯ ರೂಪದಲ್ಲಿ, ವಂಶಪಾರಂಪರ್ಯ ಹಕ್ಕಿನ ರೂಪದಲ್ಲಿ ಅಧಿಕಾರ ಹಂಚಿಕೆಯಾಗುತ್ತಿರುವ ಕೆಟ್ಟ ಉದಾಹರಣೆಗಳು ದೇಶದ ಎಲ್ಲ ರಾಜ್ಯಗಳಲ್ಲೂ ಇವೆ. ಇಂಥ ಪ್ರಜಾಪ್ರಭುತ್ವ ವಿರೋಧಿ ನಡವಳಿಕೆಗಳಿಂದ ಮಹಿಳಾ ಮೀಸಲಾತಿಯ ಉದ್ದೇಶವೇ ಮುಕ್ಕಾಗುತ್ತದೆ. ಈ ಅಪಸವ್ಯಗಳನ್ನು ಹೋಗಲಾಡಿಸುವ ದೃಷ್ಟಿಯಿಂದ, ಮಹಿಳೆಯರ ಮುಖವಾಡ ಧರಿಸಿ ಪುರುಷರು ಅಧಿಕಾರ ಚಲಾಯಿಸುವ ಸಾಧ್ಯತೆಗಳನ್ನು ಮತದಾರರು ವಿಫಲಗೊಳಿಸಬೇಕು. ಪುರುಷರ ನೆರಳು ಇಲ್ಲದ ನೈಜ ಮಹಿಳಾ ಅಭ್ಯರ್ಥಿಗಳಿಗನ್ನು ಗುರ್ತಿಸಿ ಗೆಲ್ಲಿಸುವ ಮೂಲಕ ಪ್ರಜಾಪ್ರಭುತ್ವದ ಆಶಯವನ್ನು ಸಾಕಾರಗೊಳಿಸುವ ಹೊಣೆ ಪ್ರಜೆಗಳದೇ ಆಗಿದೆ. ಈ ನಿಟ್ಟಿನಲ್ಲಿ ವಿದ್ಯಾವಂತ ಹೆಣ್ಣುಮಕ್ಕಳು ಹೆಚ್ಚು ಕ್ರಿಯಾಶೀಲರಾಗಬೇಕಿದೆ. ಶಿಕ್ಷಣ, ಸಾಫ್ಟ್‌ವೇರ್, ವೈದ್ಯಕೀಯ, ಸಮಾಜಸೇವೆ, ಮುಂತಾದ ಕ್ಷೇತ್ರಗಳಲ್ಲಿ ತೊಡಗಿಕೊಂಡಿರುವ ಪ್ರಾಜ್ಞ ಹೆಣ್ಣುಮಕ್ಕಳು ರಾಜಕೀಯ ಮಹತ್ವಾಕಾಂಕ್ಷೆಯನ್ನು ವ್ಯಕ್ತಪಡಿಸುವ ಜರೂರು ಇಂದಿನದು. ಇಂಥವರ ಸ್ಪರ್ಧೆಯಿಂದಾಗಿ ಚುನಾವಣೆಗೆ ಹೊಸತೊಂದು ಆಯಾಮವೇ ದೊರೆಯಲಿದೆ. ಈ ನಿಟ್ಟಿನಲ್ಲಿ ಮಹಿಳಾ ಸಂಘಟನೆಗಳು ಹಾಗೂ ಸರ್ಕಾರೇತರ ಸೇವಾಸಂಸ್ಥೆಗಳು ಜನರಲ್ಲಿ ಹೊಸ ರಾಜಕೀಯ ಅರಿವನ್ನು ಜಾಗೃತಗೊಳಿಸುವ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು.

ಚುನಾವಣಾ ಕಣದಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಕಾಣಿಸಿಕೊಳ್ಳುವುದರಿಂದ ಮತ್ತೊಂದು ಲಾಭವೂ ಇದೆ. ಚುನಾವಣೆ ಎನ್ನುವುದು ಪ್ರಸ್ತುತ ಹಣ, ಹೆಂಡ ಹಂಚಿಕೆಯ ವಹಿವಾಟಾಗಿ ಮತ್ತು ತೋಳ್ಬಲ ಪ್ರದರ್ಶನದ ಅಖಾಡವಾಗಿ ರೂಪುಗೊಂಡಿದೆ. ಈ ಕೊಳಕನ್ನು ತೊಡೆಯುವ ನಿಟ್ಟಿನಲ್ಲೂ ಹೆಣ್ಣುಮಕ್ಕಳ ಸ್ಪರ್ಧೆ ಮುಖ್ಯವಾದುದು. ಚುನಾವಣಾ ಕಣವೇ ಕೊಳೆತು ನಾರಿದರೆ, ಅಲ್ಲಿಂದ ಲಭ್ಯವಾಗುವ ಫಲಿತಾಂಶ ಉತ್ತಮವಾಗಿರುತ್ತದೆ ಎನ್ನುವುದನ್ನು ನಿರೀಕ್ಷಿಸಲಾಗದು. ಚುನಾವಣೆಯ ಕಲ್ಮಶವನ್ನು ತೊಳೆಯುವ ನಿಟ್ಟಿನಲ್ಲಿ ಮಹಿಳಾ ಪ್ರಾತಿನಿಧ್ಯ ಪರಿಣಾಮಕಾರಿ. ಈವರೆಗೆ ಒಂದು ಆಶಯದ ರೂಪದಲ್ಲಷ್ಟೇ ಸಾಧ್ಯವಾಗಿರುವ ಮಹಿಳಾ ಮೀಸಲಾತಿಯನ್ನು ಒಂದು ಯಶಸ್ವಿ ಮಾದರಿಯಾಗಿ ಸಾಕಾರಗೊಳಿಸುವ ಅವಕಾಶ ಪ್ರಸಕ್ತ 'ಬಿಬಿಎಂಪಿ' ಚುನಾವಣೆಗೆ ಇದೆ. ಹೊಸ ನೀರಿನ ಹರಿವಿಗೆ, ಹೊಸ ಹುಟ್ಟಿನ ಹಂಬಲಕ್ಕೆ ಈ ಚುನಾವಣೆ ಅವಕಾಶ ಒದಗಿಸಿದೆ. ಅದನ್ನು ಸಾಧ್ಯಗೊಳಿಸುವ ಅವಕಾಶವನ್ನು ಮತದಾರ ಕಳೆದುಕೊಳ್ಳಬಾರದಷ್ಟೆ.

■ **ರಘುನಾಥ ಚ.ಹ.**